ಇ) ಮಾನ್ಯ ಜಿಲ್ಲಾಧಿಕಾರಿ, ಮೈಸೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 22.7.2003 ರಂದು ಕಲಾಮಂದಿರ ನಿರ್ವಹಣೆ ಹಾಗೂ ಉಸ್ತುವಾರಿ ಸಮಿತಿ ಸಭೆ ಕರೆದು ದುರಸ್ಥಿ ಮಾಡಲು ನಿರ್ಣಯ ತೆಗೆದುಕೊಂಡು ಅಂದಾಜುಪಟ್ಟಿ ನೀಡುವಂತೆ ಸ್ಥಳೀಯ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದೆ. ಇದು ಬಂದ ನಂತರ ನಿರ್ವಹಣೆ ಮತ್ತು ದುರಸ್ಥಿಗೆ

" ಯೋಜಿಸಲಾಗಿದೆ.

ಈ) –ಅದೇ–

ಮೈಸೂರು ತಾಲ್ಲೂಕಿನ ವಸತಿ ಸಮಸ್ಯೆ

4519 (5123) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿಗೆ ಕಳೆದ ಮೂರು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ನಿಗಧಿಪಡಿಸಿದ ಗುರಿ ಏನು;

ಆ) ಈ ಎಲ್ಲ ಗುರಿಗಳ ಅನುಗುಣವಾಗಿ ಫಲಾನುಭವಿಗಳನ್ನು ಗುರುತಿಸಲಾಗಿದೆಯೇ;

ಇ) ಈ ಎಲ್ಲ ಫಲಾನುಭವಿಗಳಿಗೆ ನಿಯಮ ಪ್ರಕಾರ ಅನುದಾನ ಪಾವತಿ ಮಾಡಲಾಗಿದೆಯೇ;

ಈ) ಆಯ್ಕೆ ಹೊಂದಿ ಯೋಜನೆಯ ಸೌಲಭ್ಯ ಪಡೆಯದ ಫಲಾನುಭವಿಗಳ ಸಂಖ್ಯೆ ಎಷ್ಟು; (ವರ್ಷವಾರು ವಿವರ ನೀಡುವುದು)

ಉ) ನೋಂದಾಯಿಸಲಾಗಿರುವ ಎಲ್ಲಾ ಫಲಾನುಭವಿಗೆ ಸೂರು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮ ಏನು?

ಶ್ರಿ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) ವಸತಿ ಯೋಜನೆಗಳ ಅಡಿಯಲ್ಲಿ ನಿಗಧಿಪಡಿಸಿದ ಗುರಿ ಈ ಕೆಳಕಂಡಂತಿದೆ:

ವರ್ಷ	ಯೋಜನೆ	ಗುರಿ
2000–01	ಆಶ್ರಯ	766
	ಅಂಬೇಡ್ಕರ್	95
2001–02	ಆಶ್ರಯ	380
	ಅಂಬೇಡ್ಕರ್	91
	ನವಗ್ರಾಮ	150
2002–03	ಆಶ್ರಯ	555
	ಅಂಬೇಡ್ಕರ್	76
	ನವಗ್ರಾಮ	240

ಆ) 2002–03ನೇ ಸಾಲಿನಲ್ಲಿ ನವಗ್ರಾಮ ಯೋಜನೆಯಡಿ 20 ಫಲಾನುಭವಿಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ಫಲಾನುಭವಿಗಳನ್ನು ಗುರುತಿಸಲಾಗಿದೆ.

ಇ) ಮನೆಗಳ ನಿರ್ಮಾಣ ಹಂತವನ್ನು ಅವಲಂಬಿಸಿ ಎಲ್ಲಾ ಫಲಾನುಭವಿಗಳಿಗೆ ಅನುದಾನ ಪಾವತಿಸಲಾಗಿದೆ.

ಈ) ಇಲ್ಲ

ಉ) ಹಣಕಾಸಿನ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಎಲ್ಲಾ ನೊಂದಾಯಿತ ಫಲಾನುಭವಿಗಳಿಗೆ ವಸತಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ವಿವಿಧ ಯೋಜನೆಗಳಲ್ಲಿನ ಮನೆಗಳ ನಿರ್ಮಾಣದಲ್ಲಿನ ತೊಂದರೆ

4520 (4806) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇಂದಿರಾ ಆವಾಸ್ ಮತ್ತು ಅಂಬೇಡ್ಕರ್ ಯೋಜನೆಯಡಿಯಲ್ಲಿ ಫಲಾನುಭವಿಯಾಗಿ ಆಯ್ಕೆಯಾಗುವವರಿಗೆ ಜಮೀನಿನ ದಾಖಲೆ ಬೇಕೆಂದು ಸರ್ಕಾರ ಕಡ್ಡಾಯಗೊಳಿಸಿದೆಯೇ;

ಆ) ಇಲ್ಲವಾದಲ್ಲಿ ಈ ಕುರಿತು ಸೂಕ್ತ ಆದೇಶವನ್ನು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ನೀಡಲಾಗುವುದೇ;

ಇ) ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರು ಫಲಾನುಭವಿಯಾಗಿ ಆಯ್ಕೆಯಾಗಿ ಜಮೀನಿನ ದಾಖಲೆ ಇಲ್ಲದೆ ಮನೆ ನಿರ್ಮಿಸಿಕೊಳ್ಳಲು ಆಗದೇ ನಿಗದಿಪಡಿಸಲಾದ ಗುರಿಗಳು ಹಾಗೆಯೇ ಉಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಜಮೀನಿನ ದಾಖಲಾತಿ ಇಲ್ಲದೆ ಇರುವವರಿಗೆ ಮನೆ ನಿರ್ಮಿಸಿಕೊಳ್ಳುವಲ್ಲಿ ಸರ್ಕಾರದ ನಿಲುವೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) ಈ ಬಗ್ಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಷರತ್ತಿನಲ್ಲಿ ವಿಧಿಸಿರುವುದು ಸರಕಾರದ ಗಮನಕ್ಕೆ ಬಂದಿದೆ.

ಆ) ಮೇಲ್ಕಂಡಂತೆ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಈಗಾಗಲೇ ಆದೇಶ ಹೊರಡಿಸಿದೆ.

ಇ) ಇಲ್ಲ,

ಈ) ಆಶ್ರಯ ಮತ್ತು ಅಂಬೇಡ್ಕರ್ ಮನೆಗಳನ್ನು ಕಟ್ಟಲು ನಿವೇಶನವು ಫಲಾನುಭವಿಗಳ ಹೆಸರಿನಲ್ಲಿ ಇರುವುದು ಕಾನೂನಿನ ಪ್ರಕಾರ ಪ್ರಾಥಮಿಕ ಅವಶ್ಯಕತೆಯಾಗಿದೆ. ಅದಿಲ್ಲದೆ ಸದರಿ ಮನೆಯ ಮೇಲಿನ ಫಲಾನುಭವಿಯ ಮಾಲೀಕತ್ವವನ್ನು ಸಾಬೀತು ಮಾಡಲು ಆಗುವುದಿಲ್ಲ. ಮನೆಯ ಮಾಲೀಕತ್ವವು ಸಾಬೀತು ಆಗದಿದ್ದರೆ ಅದು ಫಲಾನುಭವಿಗೇ ಕಷ್ಟವಾಗುತ್ತದೆ. ಆದ್ದರಿಂದ ಫಲಾನುಭವಿಯ ಹಿತದೃಷ್ಟಿಯಿಂದ ನಿವೇಶನವು ಫಲಾನುಭವಿಯ ಹೆಸರಿನಲ್ಲಿರಬೇಕೆಂದು ತೀರ್ಮಾನಿಸಲಾಗಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ನಿರ್ಮಲ ಜ್ಯೋತಿ ಯೋಜನೆ

4521 (5163) : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2003-04ನೇ ಸಾಲಿನಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಲ ಜ್ಯೋತಿ ಯೋಜನೆಯಡಿಯಲ್ಲಿ ಇದ್ದ ಕೊಳಚೆ ಪ್ರದೇಶಗಳು ಯಾವುವು;